ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/330/ಪಿಹೆಚ್‌ಡಿ/ಮುಂಬ/2014-15/ಸೇವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:20-01-2015.

ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ
**ಬೆಂಗಳೂರು, ಮೈಸೂರು, ಮಂಗಳೂರು**
**ಶಿವಮೊಗ್ಗ, ಧಾರವಾಡ, ಗುಲ್ಬರ್ಗಾ.**

**ಸುತ್ತೋಲೆ**

**ವಿಷಯ:** ದಿನಾಂಕ:19-09-2007ರ ನಂತರ ಖಾಸಗಿ ಅನುದಾನಿತ ಕಾಲೇಜುಗಳ ಬೋಧಕರುಗಳಿಗೆ ಪಿ.ಹೆಚ್.ಡಿ/ಎಂ.ಫಿಲ್ ಪದವಿ ಹೊಂದಿರುವ ಪ್ರಯುಕ್ತ, ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಿರುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ:ಇಡಿ/37/ಯುಎನ್‌ಇ/2009 ದಿ:24-12-09.

** ** **

ಸೂಚಿತ ವಿಷಯ ಹಾಗೂ ಉಲ್ಲೇಖಿತ ಪತ್ರಕ್ಕೆ ಸಂಬಂಧಿಸಿದಂತೆ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳ ಉಪನ್ಯಾಸಕರುಗಳಿಗೆ ಪಿ.ಹೆಚ್.ಡಿ/ಎಂ.ಫಿಲ್ ಪದವಿ ಪಡೆದ ಪ್ರಯುಕ್ತ, ಮುಂಗಡ ವಾರ್ಷಿಕ ವೇತನ ಬಡ್ತಿಗಳನ್ನು ಮಂಜೂರು ಮಾಡಲು ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಆದೇಶಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಇಡಿ/37/ಯುಎನ್‌ಇ/2009 ದಿ:24-12-2009 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗಳನ್ನು ದಿ:01-01-2006 ರಿಂದ ಪೂರ್ವಾನ್ವಯವಾಗಿ ಜಾರಿಗೊಳಿಸಿದ್ದರೂ ಸಹ ಸದರಿ ಆದೇಶದ ಕಂಡಿಕೆ (10)ರಲ್ಲಿ "The date of effect, the revised UGC Pay Scales shall be effective from 01-01-2006 & all other allowances/benefits prospectively from the date of issue of this order" ಎಂದು ಆದೇಶಿಸಲಾಗಿರುತ್ತದೆ. ಸದರಿ ಆದೇಶದನ್ವಯ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು ಇತರ ಭತ್ಯೆ ಎಂದು ಪರಿಗಣಿಸಬೇಕಾಗಿರುತ್ತದೆ. ಮುಂದುವರೆದು ಸದರಿ ಆದೇಶದ Appendix IV ರಲ್ಲಿ ಪಿ.ಹೆಚ್.ಡಿ ಮುಂಗಡ ಬಡ್ತಿಗಳನ್ನು ನಾನ್-ಕಾಂಪೌಡಬಲ್ ಆಗಿ ಮಂಜೂರು ಮಾಡಲು ಆದೇಶಿಸಲಾಗಿರುತ್ತದೆ.

ಪ್ರಾದೇಶಿಕ ಜಂಟಿ ನಿರ್ದೇಶಕರುಗಳು ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ಪಿ.ಹೆಚ್.ಡಿ/ಎಂ.ಫಿಲ್ ಪದವಿ ಪಡೆದ ಉಪನ್ಯಾಸಕರುಗಳಿಗೆ ಮುಂಗಡ ವೇತನ ಬಡ್ತಿಗಳನ್ನು ಕಾಂಪೌಡಬಲ್ ಆಗಿ ಮಂಜೂರು ಮಾಡಿರುವುದು ಗಮನಕ್ಕೆ ಬಂದಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಆದ್ದರಿಂದ ಈಗಾಗಲೇ ದಿ:01-01-2006 ರಿಂದ 23-12-2009 ರವರೆಗೂ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು ಕಾಂಪೌಡಬಲ್ ಆಗಿ ಮಂಜೂರು ಮಾಡಿರುವುದನ್ನು ಹಿಂಪಡೆದು ವೇತನವನ್ನು ಪುನರ್ ನಿಗದಿಪಡಿಸಿ ಸದರಿ ಉಪನ್ಯಾಸಕರುಗಳು ಹೆಚ್ಚುವರಿಯಾಗಿ ಪಡೆದಿರುವ ವೇತನವನ್ನು ಲೆಕ್ಕಾಚಾರ ಮಾಡಿ ಸರ್ಕಾರದ ಖಾತೆಗೆ ಜಮಾ ಮಾಡಲು ಸೂಚಿಸಿದೆ.

ಮುಂದುವರೆದು, ದಿನಾಂಕ:24-12-2009ರ ನಂತರ ಪಿ.ಹೆಚ್.ಡಿ/ಎಂ.ಫಿಲ್ ಪದವಿ ಪಡೆದ ಉಪನ್ಯಾಸಕರುಗಳಿಗೆ ಮುಂಗಡ ವೇತನ ಬಡ್ತಿಗಳನ್ನು ನಾನ್ ಕಾಂಪೌಡಬಲ್ ಆಗಿ ಮಂಜೂರು ಮಾಡುವ ಬಗ್ಗೆ ಪ್ರಸ್ತಾವನೆಗಳನ್ನು ಈ ಕಛೇರಿಗೆ ಕಳುಹಿಸಿಕೊಡಲು ಸೂಚಿಸಿದೆ.

*(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)*

20/1/2015

ಕಾಲೇಜು ಶಿಕ್ಷಣ ನಿರ್ದೇಶಕರು.
20/01

ಕರ್ನಾಟಕ ಸರಕಾರ

ಸಂಖ್ಯೆ: ಕಾಶಿಇ/ಪ್ರಾಕಮ/70/ಯುಜಿಸಿ/2009-10
330-Phd-Private college

☏(0824)2422876, Fax(0824)2443191,
ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ,
ಕಾಲೇಜು ಶಿಕ್ಷಣ ಇಲಾಖೆ,
ಮಂಗಳೂರು, ದಿನಾಂಕ 22-01-2015.

ಮೇಲೆ ತಿಳಿಸಿರುವ ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ಸುತ್ತೋಲೆಯನ್ನು ಈ ಕಛೇರಿ ವ್ಯಾಪ್ತಿಯ ಎಲ್ಲಾ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ. ವೇತನ ಮರು ನಿಗದಿಗಾಗಿ ಮೂಲ ಸೇವಾ ಪುಸ್ತಕದೊಂದಿಗೆ ಪ್ರಸ್ತಾವನೆಯನ್ನು ಈ ಕಛೇರಿಗೆ ಕಳುಹಿಸುವಂತೆ ತಿಳಿಸಲಾಗಿದೆ.

22/01/15
ಜಂಟಿ ನಿರ್ದೇಶಕರು.